ಅವಳ ಪರವಾಗಿ ಗರಿಷ್ಠಗೊಳಿಸಬೇಕಾಗುತ್ತದೆ ಹಣಕಾಸು ಸಂಸ್ಥೆಯ ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದ್ದು ಆದಷ್ಟು ಬೇಗನೆ ಅಂತಿಮಗೊಳಿಸಲಾಗುವುದು ಈ ಸಾಲಿನ ಆಯವ್ಯಯದಲ್ಲಿ ರೂ 234 00 ಕೋಟಿಯನ್ನು ಮೀಸಲಿಡಲಾಗಿದೆ

855(1153) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್ (ಗುಲ್ಬರ್ಗಾ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದಲ್ಲಿ ನಗರ ಸಂಚಾರಿ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಆ) ಹಾಗಿದ್ದಲ್ಲಿ, ಯಾವ ಸ್ಥಳವನ್ನು ಆಯ್ಕೆ ಮಾಡಲಾಗಿರುತ್ತದೆ,

ಇ) ಇದನ್ನು ಯಾವಾಗ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ, ಇದಕ್ಕಾಗಿ ಹಣ ಮಂಜೂರು ಮಾಡಲಾಗಿದೆಯೇ ಮಂಜೂರು ಹಣ ಎಷ್ಟು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು

ಆ) ಈ ಕೆಳಕಂಡ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ

1) ಗುಲ್ಬರ್ಗಾ ನಗರದ ಸೂಪರ್‌ಮಾರ್ಕೆಟ್

2) ಗುಲ್ಬರ್ಗಾ ನಗರದ ಸರ್ದಾರ್ ವಲ್ಲಭಬಾಯಿ ಪಟೇಲ್ ಬಡಾವಣೆ (ಬಡೆಪೂರು)

ಇ) 1) 2006–07ನೇ ಸಾಲಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಈ ಕೆಲಸಕ್ಕೆ ರೂ 25 00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ

2) ಗುಲ್ಬರ್ಗಾ ನಗರದ ಸರ್ದಾರ್ ವಲ್ಲಭಬಾಯಿ ಪಟೇಲ್ ಬಡಾವಣೆಯ ಕಾಮಗಾರಿಗೆ ರೂ 25 00 ಲಕ್ಷ ಮಂಜೂರು ಮಾಡಲಾಗಿರುತ್ತದೆ

856(1154) ಶ್ರೀ ಚಂದ್ರಶೇಖರ ಪಾಟೀಲ್ ರೇವೂರ (ಗುಲ್ಬರ್ಗಾ) (ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ನಗರದ ಶರಣಬಸವೇಶ್ವರ ಕೆರೆಯ ಅಭಿವೃದ್ಧಿ ಯಾವ ಹಂತದಲ್ಲಿದೆ,

ಆ) ಇದರ ಅಭಿವೃದ್ಧಿ ಕಾಮಗಾರಿಗೆ ಎಷ್ಟು ಹಣ ಕಾಯ್ದಿರಿಸಲಾಗಿದೆ ಹಾಗೂ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಹಣ ಎಷ್ಟು,

ಇ) ಈ ಕಾಮಗಾರಿಗಳನ್ನು ಅಧಿಕೃತವಾಗಿ ಯಾವ ಏಜೆನ್ಸಿಗೆ ವಹಿಸಲಾಗಿದೆ,

ಈ) ಈ ಕಾಮಗಾರಿಯನ್ನು ಕಳಪೆ ಮಟ್ಟದಲ್ಲಿ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಸದರಿ ಏಜೆನ್ಸಿಯವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸದರಿ ಕೆರೆಯ ಅಭಿವೃದ್ಧಿ ಕಾಮಗಾರಿಯು ಭೌತಿಕವಾಗಿ ಶೇಕಡ 60 ಮತ್ತು ಆರ್ಥಿಕವಾಗಿ ಶೇಕಡಾ 30ರಷ್ಟು ಮುಗಿದಿರುತ್ತದೆ

ಆ) ಕೇಂದ್ರ ಸರ್ಕಾರದಿಂದ ರೂ 489 00 ಲಕ್ಷಗಳ ಯೋಜನಾ ವರದಿಗೆ ಮಂಜೂರಾತಿ ನೀಡಿದ್ದು ಇದರಲ್ಲಿ ರೂ 342 00 ಲಕ್ಷಗಳನ್ನು ಕೇಂದ್ರ ಸರ್ಕಾರದಿಂದ ಮತ್ತು ರೂ 125 00 ಲಕ್ಷಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ ಹಾಗೂ ಕೇಂದ್ರ ಸರ್ಕಾರದಿಂದ 125 00 ಲಕ್ಷಗಳನ್ನು ಮತ್ತು ರಾಜ್ಯ ಸರ್ಕಾರದಿಂದ 70 32 ಲಕ್ಷಗಳನ್ನು ಈವರೆವಿಗೂ ಬಿಡುಗಡೆ ಮಾಡಲಾಗಿದೆ

ಇ) ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ

ಈ) ಇದರ ಬಗ್ಗೆ ಕೆಲವು ದೂರುಗಳು ಬಂದಿರುತ್ತವೆ ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರು ಕಾಮಗಾರಿಯಲ್ಲಿ ಯಾವುದೇ ಕಳಪೆ ಗುಣಮಟ್ಟ ಕಂಡು ಬಂದಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ

ಉ) ಉದ್ಭವಿಸುವುದಿಲ್ಲ

**ಅನುಬಂಧ**

**ಶ್ರೀ ಶರಣ ಬಸವೇಶ್ವರ ಕೆರೆಯ ಕಾಮಗಾರಿಗಳನ್ನು ಈ ಕೆಳಕಂಡ ಏಜೆನ್ಸಿಗೆ ವಹಿಸಲಾಗಿದೆ**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ಕಾಮಗಾರಿ ಪಿಂಚಿಂಗ್ ಮತ್ತು ಹೂಳೆತ್ತುವುದು | ಏಜೆನ್ಸಿ ಕರ್ನಾಟಕ ಭೂ ಸೇನಾ ನಿಗಮ ಗುಲ್ಬರ್ಗಾ<br>ಇಲಾಖೆ ಸಣ್ಣ ನೀರಾವರಿ ಇಲಾಖೆ |

| | | |
|---|---|---|
| 2 | ಕಾಮಗಾರಿ ಸೆರೆ ಮೋನಿಯಲ್ ಟ್ಯಾಂಕ್ | ಏಜೆನ್ಸಿ ಎನ್ ವೈ ಪಾಟೀಲ್, ಗುಲ್ಬರ್ಗಾ<br>ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ |
| 3 | ಕಾಮಗಾರಿ ಪಾದಚಾರಿಗಳ ಪುಟ್‌ಪಾತ್ ಹಾಗೂ ಜಾಗಿಂಗ್ ಟ್ರಾಕ್, ಬೋಟ್ ಜೆಟ್ಟಿ | ಏಜೆನ್ಸಿ ಶ್ರೀ ದಾಸ ಸಂಜೀವ ರೆಡ್ಡಿ ಮತ್ತು ದೇಸಾಯಿ<br>ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ |
| 4 | ಕಾಮಗಾರಿ ಡೈವರ್ಷನ್ ಆಫ್ ಸೀವೆಜ್ | ಏಜೆನ್ಸಿ ಖುರ್ಷಿದ್<br>ಇಲಾಖೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಗುಲ್ಬರ್ಗಾ |
| 5 | ಕಾಮಗಾರಿ ಅಡಿಷನಲ್ ಸೊರ್ಸ ಆಫ್ ವಾಟರ್ | ಏಜೆನ್ಸಿ ಮಡಿವಾಳಯ್ಯ<br>ಇಲಾಖೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಗುಲ್ಬರ್ಗಾ |
| 6 | ಕಾಮಗಾರಿ ಎನ್ ಟಿ ಪಿ | ಏಜೆನ್ಸಿ ಪ್ರಿಕ್ವಾಲಿಫಿಕೇಷನ್ ಟೆಂಡರ್ ಕರೆಯಲಾಗಿದೆ<br>ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ |
| 7 | ಕಾಮಗಾರಿ ಗ್ರೀಲ್ ಫೆನ್ಸಿಂಗ್ | ಏಜೆನ್ಸಿ ಕರ್ನಾಟಕ ಭೂ ಸೇನಾ ನಿಗಮ<br>ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ |

| | | |
|---|---|---|
| 8 | ಕಾಮಗಾರಿ ಸೊಲಾರ್ ಲೈಟಿಂಗ್ | ಟೆಂಡರ್ ಕರೆಯ ಬೇಕಾಗಿದೆ ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ |
| 9 | ಕಾಮಗಾರಿ ಎರೇಷನ್ ಫೌಂಟನ್ | ಟೆಂಡರ್ ಕರೆಯ ಬೇಕಾಗಿದೆ ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ |
| 10 | ಕಾಮಗಾರಿ ಪ್ಲಾಂಟೇಷನ್ | ಟೆಂಡರ್ ಕರೆಯಬೇಕಾಗಿದೆ ಇಲಾಖೆ ಅರಣ್ಯ ಇಲಾಖೆ |

857(1155) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗಾ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದ ಎಲ್ಲಾ ರಸ್ತೆಗಳು ಸಂಪೂರ್ಣ ಹಾಳಾಗಿ ಜನ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ರಸ್ತೆಗಳ ಪುನರ್ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಾಗಿದೆಯೇ,

ಇ) ಹಾಗಿದ್ದಲ್ಲಿ, ಮಂಜೂರು ಮಾಡಲಾದ ಹಣವೆಷ್ಟು,

ಈ) ಈ ರಸ್ತೆಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಗುಲ್ಬರ್ಗಾ ಮಹಾನಗರದ ಕೆಲವು ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ರಸ್ತೆಗಳ ಪುನರ್ ನಿರ್ಮಾಣ ಕಾರ್ಯ ಮಹಾನಗರ ಪಾಲಿಕೆಯ ಕರ್ತವ್ಯವಾಗಿದೆ ಇದಲ್ಲದೇ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಯೋಜನೆಯಡಿಯಲ್ಲಿ (NKUSIP) ರಸ್ತೆಗಳ ಮನರ್ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಾಗಿದೆ (ಎ ಡಿ ಬಿ ಯೋಜನೆ)

ಇ) NKUSIP ಯೋಜನೆಯಡಿಯಲ್ಲಿ ರೂ 11 01 ಕೋಟಿಗಳನ್ನು ಒದಗಿಸಲಾಗಿದೆ